ಸಾರ್ವಜನಿಕ ಶಿಕ್ಷಣ ಇಲಾಖೆ

# ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು

## Karnataka School Quality Assessment & Accreditation Council

ಕೆ.ಎಸ್.ಇ.ಎ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03. ದೂರವಾಣಿ ಸಂಖ್ಯೆ: 23341615, 23562283, 29720300

**e-mail:** ksqaacbangalore@gmail.com

ಸಂಖ್ಯೆ: KSEAB/DPIE/KSQ2(AEOT)/1/2023-KSQAAC ದಿನಾಂಕ: 03.02.2024

## "ದರಪಟ್ಟಿ ಆಹ್ವಾನ ಪತ್ರ"

ವಿಷಯ: 2024–25ನೇ ಸಾಲಿನ ಆದರ್ಶ ವಿದ್ಯಾಲಯಗಳ 6ನೇ ತರಗತಿ ದಾಖಲಾತಿಗೆ ಲಿಖಿತ ಪರೀಕ್ಷೆಯನ್ನು ನಡೆಸುವ ಸಂಬಂಧವಾಗಿ ಪೂರ್ವಮುದ್ರಿತ ಪರೀಕ್ಷಾ ಸಾಮಗ್ರಿಗಳನ್ನು ಮುದ್ರಿಸಿ ಸರಬರಾಜು ಮಾಡಲು ಹಾಗೂ ಪರೀಕ್ಷಾ ನಂತರ ಉತ್ತರಿಸಿದ OMR ಮತ್ತು Marks Sheet OMR ಗಳ Scanning, Editing, Processing and Report Generation ಮಾಡಲು ದರಪಟ್ಟಿ ಆಹ್ವಾನಿಸಿರುವ ಬಗ್ಗೆ.

*~*~*~*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2024–25 ನೇ ಸಾಲಿನ ಆದರ್ಶ ವಿದ್ಯಾಲಯಗಳ ಲಿಖಿತ ಪರೀಕ್ಷೆಯನ್ನು ನಡೆಸುವ ಸಂಬಂಧವಾಗಿ ಪೂರ್ವಮುದ್ರಿತ ಓ.ಎಂ.ಆರ್, Attendance Cum Absentees Sheets, Pre Printed Adhesive Covers ಮತ್ತು AML Sheet ಗಳನ್ನು ಮುದ್ರಣ ಮತ್ತು ಸರಬರಾಜು ಮಾಡಲು ಹಾಗೂ ಪರೀಕ್ಷಾ ನಂತರ ಉತ್ತರಿಸಿದ OMR ಗಳ SCANNING, EDITING, PROCESSING AND REPORT GENERATION ಮಾಡುವ ಸಂಬಂಧ ಅರ್ಹ ಸಂಸ್ಥೆಗಳಿಂದ ಈ ಕೆಳಗಿನಂತೆ ಷರತ್ತುಗಳಿಗೊಳಪಟ್ಟು ದರಪಟ್ಟಿಯನ್ನು ಆಹ್ವಾನಿಸಿದೆ.

| Sl. No. | Printing And Supply Works & | Quantity Approximate | Units | Unit Rate |
|---|---|---|---|---|
| 01 | Designing, Printing and Over Printing of OMR Forms With Generating Barcode (Code 128) Pre Printed of School and Student Information Using the Database Provided in Excel sheet on **A4 size, (Two Colors) 110 GSM A GRADE MILL PAPER** | 70,000 OMR Sheets **Initiating printing of OMR AND Over printing of OMR** | | |
| 02 | Attendance Cum Absentees Sheets (NOMINAL ROLL) Student Data with photo on Each Sheet (A4 Size, Single Color, 70GSM one side printing) **A GRADE MILL PAPER** | 20,000 Sheets | | |
| 03 | Pre Printed Adhesive Covers self Sticking Adhesive tramper proof preprinted covers double layered LDPE COVERS over printing of given data **(200 Microns, 18*12 cm with flap and gumming) Both side single color Printing of Given Information** | 335 Covers | | |
| 05 | OMRs Scanning, Editing, Processing for Adarsha examination **Both sides of OMR and Block level Scanning of *OMR forms and converting into Data Base.*** | 70,000 OMR Sheets | | |
| 07 | Report Generation for Adarsha examination Using the Templates Provided ( Taluk wise, District Wise and State Wise) | 03 Templates | | |

ಷರತ್ತುಗಳು:–

1. ಈ ದರಪಟ್ಟಿಯಲ್ಲಿ ನೀಡಿರುವ ನಮೂನೆಯಂತೆ ವಿವರಗಳನ್ನು ನಮೂದಿಸುವುದು.
2. ಮೇಲ್ಕಂಡ ಕಾರ್ಯಗಳಿಗೆ ಎಲ್ಲಾ ತರಹದ ತೆರಿಗೆಗಳನ್ನು ಮತ್ತು GST ಒಳಗೊಂಡಂತೆ ದರವನ್ನು ನಮೂದಿಸತಕ್ಕದ್ದು.
3. ಕಡಿಮೆ ದರ ನಮೂದಿಸಿರುವ ಸಂಸ್ಥೆಯ ದರಗಳನ್ನು ಪರಿಗಣಿಸಲಾಗುವುದು.
4. ಈ ಕಛೇರಿಯಿಂದ ನಿಯಮಾನುಸಾರ TDS & GST ಕಟಾಯಿಸಲಾಗುವುದು.
5. ಒಂದು ಸಂಸ್ಥೆಯವರು ಒಂದು ದರಪಟ್ಟಿಯನ್ನು ಮಾತ್ರ ನೀಡಲು ಅವಕಾಶವಿರುತ್ತದೆ.
6. ಮೇಲ್ಕಂಡ ಕಾರ್ಯವನ್ನು ನಿಗಧಿತ ಅವಧಿಯೊಳಗೆ ತೃಪ್ತಿಕರವಾಗಿ ಪೂರ್ಣಗೊಳಿಸತಕ್ಕದ್ದು.
7. ಈ ಕಾರ್ಯವು ಪರೀಕ್ಷಾ ಕಾರ್ಯವಾಗಿರುವುದರಿಂದ ಪರೀಕ್ಷಾ ಗೌಪ್ಯತೆಯನ್ನು ಕಾಪಾಡಿಕೊಳ್ಳುವಂತಿರಬೇಕು.
8. ಈ ಕಾರ್ಯಕ್ಕೆ ಕಛೇರಿಯಿಂದ ಯಾವುದೇ ಮುಂಗಡವನ್ನು ನೀಡಲಾಗುವುದಿಲ್ಲ.
9. ಆಯ್ಕೆಯಾದವರು ಮುದ್ರಿತ ಸಾಮಾಗ್ರಿಗಳನ್ನು 34 ಡಯಟ್‌ಗಳಿಗೆ ಸರಬರಾಜು ಮಾಡಿ ಸ್ವೀಕೃತಿಗಳನ್ನು (Delivery Challan) ನೀಡಿದ ನಂತರವಷ್ಟೆ ನಿಯಮಾನುಸಾರ ಪರಿಶೀಲಿಸಿ ಹಣ ಪಾವತಿಸಲಾಗುವುದು.
10. ದರಪಟ್ಟಿಯನ್ನು ಮೊಹರು ಮಾಡಿದ ಲಕೋಟೆಯಲ್ಲಿ **ದಿನಾಂಕ:14.02.2024 ರಂದು ಸಂಜೆ 5–00 ರ ಒಳಗಾಗಿ** ಈ ಕಛೇರಿಗೆ ಸಲ್ಲಿಸಬೇಕು. ನಿಗಧಿತ ಸಮಯದ ನಂತರ ಬರುವ ದರಪಟ್ಟಿಯನ್ನು ಸ್ವೀಕರಿಸಲಾಗುವುದಿಲ್ಲ.
11. ಪರೀಕ್ಷೆ ಮುಗಿದ ನಂತರ ಜಿಲ್ಲೆಗಳಿಂದ ಬಂದ OMR ಬಂಡಲ್‌ಗಳನ್ನು ಹಸ್ತಾಂತರಿಸಲಾಗುವುದು. ನಂತರ Scanning ಪ್ರಕ್ರಿಯೆ ಆರಂಭಿಸುವುದು 10 ದಿನಗಳ ಅವಧಿಯೊಗಳಗೆ Reports generation ಕಾರ್ಯ ಪೂರ್ಣಗೊಳಿಸಿ ಫಲಿತಾಂಶವನ್ನು ಕೆ.ಎಸ್.ಕ್ಯು.ಎ.ಎ.ಸಿ ಕಛೇರಿಗೆ ಹಸ್ತಾಂತರಿಸುವುದು. ನಿಗಧಿತ ಅವಧಿಯಲ್ಲಿ ಕಾರ್ಯವನ್ನು ಪೂರ್ಣಗೊಳಿಸದಿದ್ದಲ್ಲಿ ದಿನವೊಂದಕ್ಕೆ ಒಟ್ಟು ಬಿಲ್ಲಿನ ಮೊತ್ತಕ್ಕೆ 0.5% ರಷ್ಟು ದಂಡವನ್ನು ವಿಧಿಸಲಾಗುವುದು.
12. ಆಯ್ಕೆಯಾದವರು ಸೂಕ್ತ ಕಂಪ್ಯೂಟರ್ ಸಾಮಗ್ರಿ ಮತ್ತು ಉತ್ತಮ ಗುಣಮಟ್ಟದ High End OMR Scanning Machines ಗಳನ್ನು ಸೂಕ್ತ Software ಗಳನ್ನು ಹೊಂದಿದ್ದು ತಮ್ಮ ಸ್ವಂತ ಖರ್ಚಿನಲ್ಲಿ ಸ್ಕ್ಯಾನಿಂಗ್ ಅಳವಡಿಸುವುದು. ಇದಕ್ಕೆ ಕಛೇರಿಯಿಂದ ಯಾವುದೇ ಹಣ ನೀಡುವುದಿಲ್ಲ.
13. ಸಂಪೂರ್ಣ ಸ್ಕ್ಯಾನಿಂಗ್ ಪ್ರಕ್ರಿಯೆಯು ಕೆ.ಎಸ್.ಕ್ಯು.ಎ.ಎ.ಸಿ ಕಛೇರಿ ಆವರಣದಲ್ಲಿ ನಡೆಸಬೇಕಾಗಿದೆ.
14. ಸ್ಕ್ಯಾನಿಂಗ್ ಪ್ರಕ್ರಿಯೆಯಲ್ಲಿ ಯಾವುದೇ ದೋಷಗಳುಂಟಾಗದಂತೆ (Data Errors, scanning Errors) ಸ್ಕ್ಯಾನಿಂಗ್ ಪ್ರಕ್ರಿಯೆ ನಿರ್ವಹಿಸುವುದು. ಯಾವುದೇ ದೋಷಗಳು ಕಂಡುಬಂದಲ್ಲಿ ಒಂದು ಪುಟಕ್ಕೆ ರೂ 50ಗಳಂತೆ ದಂಡವನ್ನು ವಿಧಿಸಲಾಗುವುದು.
15. ಕಛೇರಿಯ ಅನುಮತಿಯಿಲ್ಲದೆ ಯಾವುದೇ ಮಾಹಿತಿಗಳನ್ನು ಯಾರೊಂದಿಗೂ ಹಂಚಿಕೊಳ್ಳಬಾರದು.
16. OMRಗಳನ್ನು ನೀಡಿದ ನಂತರ 10 ದಿನಗಳೊಳಗೆ ಸ್ಕ್ಯಾನಿಂಗ್, ರಿಪೋರ್ಟ್ ಜನರೇಷನ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಫಲಿತಾಂಶ ನೀಡಬೇಕು.
17. ರಿಪೋರ್ಟ್‌ನ್ನು CD/DVD ನಲ್ಲಿ ನೀಡಬೇಕು.
18. ಸಂಪೂರ್ಣ ಫಲಿತಾಂಶ ನೀಡಿ ಬಿಲ್ಲನ್ನು ಸಲ್ಲಿಸಿದ ನಂತರ ನಿಯಮಾನುಸಾರ ಪರಿಶೀಲಿಸಿ ಸರ್ಕಾರಿ ಮುದ್ರಣಾಲಯದಿಂದ ಮುದ್ರಣಕ್ಕೆ ಬಳಸಿರುವ ಕಾಗದದ ಗುಣಮಟ್ಟ ಪರೀಕ್ಷಿಸಿ ವರದಿ ಬಂದ ನಂತರ ಪಾವತಿಗೆ ಕ್ರಮವಹಿಸುವುದು.
19. ತಿಳಿಸಿರುವ ಎಲ್ಲಾ Item ಗಳಿಗೂ ಪ್ರತ್ಯೇಕವಾಗಿ ದರ ನಮೂದಿಸುವುದು.

ಕಾರ್ಯನಿರ್ವಾಹಕ ನಿರ್ದೇಶಕರು
ಕೆ.ಎಸ್.ಕ್ಯು.ಎ.ಎ.ಸಿ

ಪ್ರತಿಯನ್ನು:–

1. ಕಛೇರಿಯ ಸೂಚನಾ ಫಲಕಕ್ಕೆ.
2. ಕಛೇರಿ ಪ್ರತಿ.